ದಿನಾಂಕಃ 09.09.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್.ಬಿ.ಎ. ವಕೀಲರಿಂದಃ**

ದಿ.06.04.2021 ರಂದು 1 ನೇ ಆರೋಪಿಯ ಪತ್ನಿಯು ನನ್ನ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತಾರೆ. ಸದರಿ ದೂರನ್ನು ನಾನು 1 ನೇ ಆರೋಪಿಗೆ ಕತ್ತಿಯಿಂದ ಹಲ್ಲೆ ಮಾಡಿದ ಬಾಬ್ತು ನೀಡಲಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ದೂರನ್ನು ನನ್ನ ಮತ್ತು ಗಂಡನ ವಿರುದ್ಧ ಸುಳ್ಳು ಆರೋಪ ಮಾಡಿ ದಾಖಲಿಸಲಾಗಿರುತ್ತದೆ. ಸದರಿ ದೂರಿನ ವಿರುದ್ಧ ನನ್ನ ಮತ್ತು ನನ್ನ ಗಂಡನ ವಿರುದ್ಧ ಕ್ರೈಂ.ನಂ.12/2021 ರಡಿಯಲ್ಲಿ ಸುಳ್ಳು ಪ್ರಕರಣ ದಾಖಲು ಮಾಡಲಾಗಿರುತ್ತದೆ. ಸದರಿ ಪ್ರಕರಣವು ಸಿಸಿ.567/2022 ರಡಿಯಲ್ಲಿ ಈ ನ್ಯಾಯಾಲಯದ ಮುಂದೆಯೇ ಚಾಲ್ತಿಯಲ್ಲಿರುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ಕೆಲಸದ ಸಮಯದಲ್ಲಿ ತುಂಬುದೋಳಿನ ಶರ್ಟ್ ನ್ನು ಕೆಲಸದ ಸಮಯದಲ್ಲಿ ಕಡ್ಡಿಗಳು ಕೈ ಗಳಿಗೆ ತಗುಲಬಾರದು ಎಂಬ ಕಾರಣದಿಂದ ಹಾಕಿಕೊಳ್ಳುತ್ತೇವೆ ಎಂದರೆ ಸರಿ. ಆ ದಿನ ತೋಳಿನ ಗುಂಡಿಯನ್ನು ಹಾಕಿರುವುದಿಲ್ಲ. ಆ ದಿನ ಶರ್ಟ್ ನ್ನು ಯಾವ ರೀತಿಯಲ್ಲಿ ಧರಿಸಿದ್ದೆ ಎಂಬುದರ ಬಗ್ಗೆ ನನಗೆ ನೆನಪಾಗುತ್ತಿಲ್ಲ. ಆ ದಿನ ಹಲ್ಲೆಯಲ್ಲಿ ನನ್ನ ಎಡಗೈ ಒಳಮಗಲಿನಲ್ಲಿ ಬಳೆ ತೊಡುವ ಜಾಗದಲ್ಲಿ ಗಾಯವಾಗಿರುತ್ತದೆ. ಸದರಿ ವಿಷಯವನ್ನು ವೈದ್ಯರಿಗೆ ತಿಳಿಸಿರುವ ಬಗ್ಗೆ ನೆನಪಾಗುತ್ತಿಲ್ಲ. ನನ್ನ ಬಳೆ ತೊಡುವ ಜಾಗದಲ್ಲಿ ನನ್ನ ಕೈಗೆ ಪೆಟ್ಟಾಗಿರುವುದಿಲ್ಲ ಎಂದರೆ ಸರಿಯಲ್ಲ.

ಸದರಿ ವಿಷಯವನ್ನು ನಾನು ವೈದ್ಯರಿಗೆ ಹೇಳಿರುವ ವಿಷಯ ನೆನಪಾಗುತ್ತಿಲ್ಲ. ಆ ದಿನ ಆರೋಪಿಗಳು ನಮ್ಮ ತೋಟದ 3 ರಿಂದ 4 ಕಂಬಗಳನ್ನು ಕಿತ್ತಿರಬಹುದು. ಸದರಿ ಕಂಬಗಳು ಸ್ಥಳದಲ್ಲಿಯೇ ಇದ್ದವೋ ಇಲ್ಲವೋ ಎಂಬುದರ ಬಗ್ಗೆ ಪೋಲಿಸರಿಗೆ ಮಾಹಿತಿ ನೀಡಿರುವ ಬಗ್ಗೆ ನನಗೆ ನೆನಪಾಗುತ್ತಿಲ್ಲ. ಸದರಿ ವಿಷಯವನ್ನು ನಾನು ಮಹಜರ್ ಸಮಯದಲ್ಲಿ ಪೋಲಿಸರಿಗೆ ತಿಳಿಸಿರುತ್ತೇನೆ. ಸದರಿ ಸಮಯದಲ್ಲಿ ಪೋಲಿಸರು ಫೋಟೋವನ್ನು ತೆಗೆದುಕೊಂಡಿರುತ್ತಾರೆ. ನಿಪಿ-3, 4 ಮತ್ತು 5 ರಲ್ಲಿ ಕಂಬಗಳು ಕಿತ್ತಿರುವ ಬಗ್ಗೆ ಕುರುಹುಗಳು ಇಲ್ಲ ಎಂದರೆ ಸರಿ. ಸದರಿ ಸಮಯದಲ್ಲಿ ನನ್ನ ಗಂಡ ಆಸ್ಪತ್ರೆಗೆ ಹೋಗಿರುತ್ತಾರೆ. ದಿ.13.01.2022 ರಂದು 2 ನೇ ಆರೋಪಿಯು ನನ್ನ ಮತ್ತು ನನ್ನ ಗಂಡನ ವಿರುದ್ಧ ಸುಳ್ಳು ದೂರನ್ನು ಚಿಕ್ಕಮಗಳೂರಿನ ಎಸ್.ಪಿ ರವರಿಗೆ ನೀಡಿರುತ್ತಾರೆ. ಸದರಿ ದೂರಿನ ಆಧಾರದ ಮೇರೆಗೆ ಕ್ರೈ.ನಂ.2/2022 ರಡಿಯಲ್ಲಿ ಒಂದು ಪ್ರಕರಣವು ದಾಖಲಾಗಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸದರಿ ಸಂಬಂಧ ನನ್ನ ಗಂಡ ಚಿಕ್ಕಮಗಳೂರಿನ ನ್ಯಾಯಾಲಯದಲ್ಲಿ ಜಾಮೀನನ್ನು ಪಡೆದಿರುವ ಬಗ್ಗೆ ನನಗೆ ನೆನಪಾಗುತ್ತಿಲ್ಲ. 1 ಮತ್ತು 2 ನೇ ಆರೋಪಿಯು ನಮ್ಮ ವಿರುದ್ಧ ನೀಡಿರುವ ದೂರಿನ ಪ್ರತಿಯಾಗಿ ಪ್ರಸ್ತುತ ಪ್ರಕರಣವನ್ನು ದಾಖಲಿಸಲಾಗಿರುತ್ತದೆ ಎಂದರೆ ಸರಿಯಲ್ಲ.

ಸದರಿ ಹಲ್ಲೆಯಿಂದ ನಾನು ಧರಿಸಿದ್ದ ಶರ್ಟ್ ಹರಿದಿರುವ ಬಗ್ಗೆ ನನಗೆ ನೆನಪಾಗುತ್ತಿಲ್ಲ.

ಆರೋಪಿಗಳು ನಮ್ಮ ತೋಟದ ಬೇಲಿಯನ್ನು ಕಿತ್ತಿರುವುದಿಲ್ಲ ಮತ್ತು ನನ್ನ ಮೇಲೆ ಯಾವುದೇ ಹಲ್ಲೆಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಆರೋಪಿಗಳು ನನಗೆ ಅವಾಚ್ಯ ಶಬ್ದಗಳಿಂದ ನಿಂದಿಸಿರುವುದಿಲ್ಲ ಮತ್ತು ನನ್ನ ಜುಟ್ಟನ್ನು ಹಿಡಿದು ಎಳೆದಾಡಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಪೋಲಿಸರು ಯಾವುದೇ ಮಹಜರ್ ಕ್ರಮವನ್ನು ಜರುಗಿಸಿರುವುದಿಲ್ಲ ಮತ್ತು ಯಾವುದೇ ಬಟ್ಟೆಯನ್ನು ವಶಕ್ಕೆ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಮಹಜರ್ ಕ್ರಮ ಜರುಗಿಸಿದ ಸಮಯದಲ್ಲಿ ಚಾಸಾ-2 ರವರ ಹಾಜರಿರುವುದಿಲ್ಲ. ಪೋಲಿಸರು ವಶಪಡಿಸಿಕೊಂಡ ಕತ್ತಿಯನ್ನು ಅಳತೆ ಮಾಡಿರುವುದಿಲ್ಲ. ಆರೋಪಿಗಳು ಯಾವುದೇ ಹಲ್ಲೆ ಮಾಡದಿದ್ದರೂ ಅವರ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಪ್ರಕರಣಗಳನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ದೂರಿನಲ್ಲಿ ಹೇಳಿರುವಷ್ಟು ಜಮೀನು ನನಗಿರುವುದಿಲ್ಲ ಎಂದರೆ ಸರಿಯಲ್ಲ. ಪಹಣಿಯಲ್ಲಿ ತಪ್ಪಾಗಿ ನಮೂದಿಸಿರುವುದನ್ನು ಆಧಾರವಾಗಿಟ್ಟುಕೊಂಡು ಆರೋಪಿಗಳ ವಿರುದ್ಧ ಸುಳ್ಳು ಪ್ರಕರಣಗಳನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಒಂದು ವೇಳೆ ಹಲ್ಲೆಯಾಗಿದ್ದಲ್ಲಿ ನಾನು ಧರಿಸಿದ್ದ ಶರ್ಟ್ ಹರಿದಿರುತಿತ್ತು ಆದರೆ ಹಲ್ಲೆಯಾಗಿದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಿ.ಸಿ.899/2022 ಪಿಡಬ್ಲ್ಯೂ-2

ದಿನಾಂಕಃ 09.09.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್.ಬಿ.ಎ. ವಕೀಲರಿಂದಃ**

ದಿ.17.01.2022 ರಂದು ಚಾಸಾ-1 ರವರು ಕರೆ ಮಾಡಿದ ನಂತರ ಬೆ.9.00 ರಿಂದ 9.30 ರ ಸಮಯದೊಳಗೆ ನಾನು ಬಕ್ಕೀ ಗ್ರಾಮಕ್ಕೆ ಹೋಗಿರುತ್ತೇನೆ. ಸದರಿ ವಿಷಯವನ್ನು ನಾನು ಪೋಲಿಸರಿಗೆ ನನ್ನ ಹೇಳಿಕೆಯಲ್ಲಿ ತಿಳಿಸಿರುವುದಿಲ್ಲ. ನಾನು ಬಕ್ಕೀ ಗ್ರಾಮಕ್ಕೆ ಹೋದ ಸಮಯದಲ್ಲಿ ಚಾಸಾ-1 ರವರು ತೋಟದಿಂದ ಬಂದಿರುತ್ತಾರೆ. ಅವರು ಆಸ್ಪತ್ರೆಗೆ ಹೊರಟು ಕೂತಿದ್ದರೋ ಇಲ್ಲವೋ ಎಂದು ನೆನಪಾಗುತ್ತಿಲ್ಲ. ಅವರು ಆಸ್ಪತ್ರೆಗೆ ಹೊರಟಾಗ ಯಾವ ಬಟ್ಟೆಯನ್ನು ಧರಿಸಿದ್ದರು ಎಂಬುದರ ಬಗ್ಗೆ ನನಗೆ ತಿಳಿದಿರುವುದಿಲ್ಲ. ಮ.12.00 ರ ಸಮಯಕ್ಕೆ ಚಿಕ್ಕಮಗಳೂರಿನ ಆಸ್ಪತ್ರೆಗೆ ತಲುಪಿರುತ್ತೇವೆ. ಮೊದಲು ಮೂಡಿಗೆರೆ ಆಸ್ಪತ್ರೆಗೆ ತೆರಳಿ ಅಲ್ಲಿ ಸದರಿ ಸಮಯದಲ್ಲಿ ಚಾಸಾ-1 ರವರಿಗೆ ಹೆಚ್ಚು ರಕ್ತಸ್ರಾವವಾಗುತ್ತಿದ್ದ ಕಾರಣ ಸದರಿ ಸಮಯದಲ್ಲಿ ಆಸ್ಪತ್ರೆಯಲ್ಲಿ ವೈದ್ಯರಿಲ್ಲದ ಕಾರಣ ಚಿಕ್ಕಮಗಳೂರಿಗೆ ಕರೆದುಕೊಂಡು ಹೋಗಲಾಗಿರುತ್ತದೆ. ಮೂಡಿಗೆರೆ ಆಸ್ಪತ್ರೆಯಲ್ಲಿ ಎಷ್ಟು ಗಂಟೆಗಳ ಕಾಲ ಇದ್ದೆವು ಎಂದು ಹೇಳಲು ಸಾಧ್ಯವಿಲ್ಲ. ಚಾಸಾ-1 ರವರು ಪ್ರಕರಣದ ಬಗ್ಗೆ ದೂರವಾಣಿಯಲ್ಲೇ ಹೇಳಿದ್ದ ಕಾರಣ ಮನೆಗೆ ಹೋಗಿದ್ದ ಸಂದರ್ಭದಲ್ಲಿ ಪುನಃ ಕೂಲಂಕುಶವಾಗಿ ಕೇಳಿರುತ್ತೇನೆ. ನಂತರ ಮನೆಯಲ್ಲಿ 10 ನಿಮಿಷಗಳ ಕಾಲ ಇರಬಹುದು.

ಪೋಲಿಸರು ಯಾವ ವಸ್ತುಗಳನ್ನು ವಶಪಡಿಸಿಕೊಂಡಿರುತ್ತಾರೆ ಎಂಬುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಚಾಸಾ-1 ರವರ ಎಡಗೈ ನಲ್ಲಿ ರಕ್ತಸ್ರಾವವಾಗುತ್ತಿತ್ತು. ಎಡಗೈ ನ ವಾಚ್ ನ್ನು ಕಟ್ಟುವ ಜಾಗದಲ್ಲಿ ಗಾಯವಾಗಿರುತ್ತದೆ. ಆಸ್ಪತ್ರೆಗೆ ಚಾಸಾ-1 ರವರು ನಾನೇ ದಾಖಲಿಸಿರುತ್ತೇನೆ. ಚಾಸಾ-1 ರವರು ನನ್ನ ಸಹೋದರಿಯಾದ ಕಾರಣ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರು ಕುಟುಂಬದವರ ಮದ್ಯದಲ್ಲಿ ಆಸ್ತಿಯಂಚಿಕೆಯಾಗಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಚಾಸಾ-1 ಮತ್ತು ಆರೋಪಿಗಳ ನಡುವೆ ಬಾಕಿ ಇರುವ ಪ್ರಕರಣಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಬಕ್ಕೀ ಗ್ರಾಮದಿಂದ ಚಿಕ್ಕಮಗಳೂರಿಗೆ ತೆರಳಲು ಅಂದಾಜು 1 ಗಂಟೆ ಸಮಯಬೇಕಾಗುತ್ತದೆ. ಆ ದಿನ ಜೀಪ್ ನಲ್ಲಿ ಚಿಕ್ಕಮಗಳೂರಿಗೆ ತೆರಳಿರುತ್ತೇವೆ. ಕೃತ್ಯ ನಡೆಯಿತು ಎಂದು ಹೇಳಲಾದ ದಿನದ ನಂತರ ನಾನು ಪೋಲಿಸ್ ಠಾಣೆಗೆ ಹೋಗಿರುವುದಿಲ್ಲ ಮತ್ತು ಪೋಲಿಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಚಾಸಾ-1 ರವರ ಗಂಡನ ವಿರುದ್ಧ ದಾಖಲಾಗಿದ್ದ ಪ್ರಕರಣದ ಪ್ರತಿಯಾಗಿ ಈ ಪ್ರಕರಣವನುನ ದಾಖಲಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ.

ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ಚಾಸಾ-1 ರವರು ಹೇಳಿರುವ ಗನ್ನಿನ ವಿಚಾರ ನನಗೆ ತಿಳಿದಿರುವುದಿಲ್ಲ.

**<u>ಮರುವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಿ.ಸಿ.899/2022 ಪಿಡಬ್ಲ್ಯೂ-3

ದಿನಾಂಕಃ 09.09.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್.ಬಿ.ಎ. ವಕೀಲರಿಂದಃ**

ಪಂಚರಾಗಿ ಹಾಜರಾಗಲು ನನಗೆ ಯಾವುದೇ ಲಿಖಿತ ನೋಟೀಸನ್ನು ಜಾರಿ ಮಾಡಿರುವುದಿಲ್ಲ. ಚಾಸಾ-4 ಸದರಿ ಸಮಯದಲ್ಲಿ ಎಲ್ಲಿದ್ದರು ಎಂದು ನನಗೆ ತಿಳಿದಿರುವುದಿಲ್ಲ. ನಾನು ಮಹಜರ್ ಗೆ ಹೋದ ಕಾಲದಲ್ಲಿ 2-3 ಕಂಬಗಳು ಕೆಳಗೆ ಬಿದ್ದಿದ್ದವು. ಮಹಜರ್ ಸಮಯದಲ್ಲಿ ಪೋಲಿಸರು ಯಾವುದರ ಬಾಬ್ತು ಫೋಟೋ ತೆಗೆದಿರುತ್ತಾರೆ ಎಂದು ನನಗೆ ತಿಳಿದಿರುವುದಿಲ್ಲ. ನಿಪಿ-3 ರಿಂದ 5 ರಲ್ಲಿ ಕಂಬಗಳು ಬಿದ್ದಿರುವ ಬಗ್ಗೆ ಯಾವುದೇ ಕುರುಹುಗಳು ಇಲ್ಲ ಎಂದರೆ ಸರಿ. ಸದರಿ ಸಮಯದಲ್ಲಿ ಯಾವುದೇ ನಕಾಶೆಯನ್ನು ತಯಾರಿಸಿರುವುದಿಲ್ಲ. ನಾನು ಎಷ್ಟು ಕಡೆ ಸಹಿ ಮಾಡುರುತ್ತೇನೆ ಎಂಬುದರ ನೆನಪಾಗುತ್ತಿಲ್ಲ. ಕೃತ್ಯ ನಡೆದ ಸ್ಥಳದಲ್ಲಿ ಹೊಸ ಬೇಲಿ ಇತ್ತು. ನಿಪಿ-3 ರಿಂದ 5 ರಲ್ಲಿ ಯಾವ ರೀತಿಯ ಬೇಲಿ ಎಂದು ಕಂಡುಬರುತ್ತಿಲ್ಲ ಎಂದರೆ ಸರಿ. ನಿಪಿ-2 ರಲ್ಲಿ ಏನನ್ನು ಬರೆಯಲಾಗಿದೆ ಎಂದು ನನಗೆ ತಿಳಿದಿರುವುದಿಲ್ಲ. ಚಾಸಾ-1 ರವರು ನಮ್ಮ ಊರುಮನೆಯವರಾಗಿರುತ್ತಾರೆ. ಪೋಲಿಸರು ಬಂದು ಕರೆದ ಮೇರೆಗೆ ನಾನು ಪಂಚನಾಗಿ ಹಾಜರಾಗಿರುತ್ತೇನೆ. ಚಾಸಾ-1 ರವರು ನಮ್ಮ ಆತ್ಮೀಯರಾಗಿರುವುದರಿಂದ ಆರೋಪಿಗಳ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನಾ ಸ್ಥಳದಿಂದ ಎಂ.ಒ.1 ನ್ನು ಚಾಸಾ-1 ರವರು ಪೋಲಿಸರಿಗೆ ನೀಡಿರುತ್ತಾರೆ.

ಎಂ.ಒ.1 ನ್ನು ಪೋಲಿಸರು ಅಳತೆ ಮಾಡಿರುವುದಿಲ್ಲ. ಎಂ.ಒ.2 ಮತ್ತು 3 ನ್ನು ಮಹಜರ್ ಸಮಯದಲ್ಲಿ ಚಾಸಾ-1 ಪೋಲಿಸರಿಗೆ ನೀಡಿರುತ್ತಾರೆ ಅದು ಹರಿದಿತ್ತಾ ಎಂದು ನನಗೆ ತಿಳಿದಿರುವುದಿಲ್ಲ. ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರದಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮಹಜರ್ ದಿನವನ್ನು ಹೊರತುಪಡಿಸಿ ಇತರ ದಿನಗಳಲ್ಲಿ ನಾನು ಪೋಲಿಸ್ ಠಾಣೆಗೆ ಹೋಗಿ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ದಿನಾಂಕಃ 09.09.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್.ಬಿ.ಎ. ವಕೀಲರಿಂದಃ**

ಪಂಚರಾಗಿ ಹಾಜರಾಗಲು ನನಗೆ ಯಾವುದೇ ಲಿಖಿತ ನೋಟೀಸನ್ನು ಜಾರಿ ಮಾಡಿರುವುದಿಲ್ಲ. ಆ ದಿನ ಯಾವುದೇ ನಕಾಶೆಯನ್ನು ತಯಾರಿಸಿರುವುದಿಲ್ಲ. ಆ ದಿನ ನಾನು ಕೇವಲ ಒಂದು ಸಹಿಯನ್ನು ಮಾಡಿರುತ್ತೇನೆ. ನಿಪಿ-2 ರಲ್ಲಿ ಏನನ್ನು ಬರೆಯಲಾಗಿದೆ ಎಂದು ನನಗೆ ತಿಳಿದಿರುವುದಿಲ್ಲ. ನನ್ನ ಮತ್ತು 1 ನೇ ಆರೋಪಿಯ ವಿರುದ್ಧ ಯಾವುದೇ ವೈಮನಸ್ಸಿರುವುದಿಲ್ಲ. ನಾವು ಆತ್ಮೀಯರಾಗಿರುತ್ತೇವೆ. ಇಲ್ಲಿಯವರೆಗೂ ಯಾವುದೇ ಗಲಾಟೆ ಘರ್ಷಣೆ ಇರುವುದಿಲ್ಲ. ಬಕ್ಕೀ ಗ್ರಾಮದ ಶಾಲೆಯ ಬಾಬ್ತು ನಾನು 1 ನೇ ಆರೋಪಿಯ ಜಮೀನಿನ ಪೈಪ್ ಲೈನ್ ಗೆ ಹಾನಿ ಮಾಡಿರುವ ಕುರಿತು ನನ್ನ ವಿರುದ್ಧ ಪ್ರಕರಣ ದಾಖಲಾಗಿರುತ್ತದೆ ಎಂದರೆ ಸರಿ. ಸಿಸಿ.770/2022 ರಡಿಯಲ್ಲಿ ಪ್ರಕರಣ ಚಾಲ್ತಿಯಾಲ್ಲಿರುತ್ತದೆ ಎಂದರೆ ಸರಿ. ಇದನ್ನು ಹೊರತುಪಡಿಸಿ ಇನ್ಯಾವುದೇ ಪ್ರಕರಣವೂ ನನ್ನ ಮತ್ತು 1 ನೇ ಆರೋಪಿಯ ಮಧ್ಯೆ ಬಾಕಿ ಇರುವುದಿಲ್ಲ. ನಾನು ಚಾಸಾ-1 ರವರೊಟ್ಟಿಗೆ ಸೇರಿ ಆರೋಪಿಗಳಿಗೆ ತೊಂದರೆಯನ್ನು ನೀಡುತ್ತಿರುತ್ತೇನೆ ಎಂದರೆ ಸರಿಯಲ್ಲ. ದಿ.03.01.2024 ರಂದು 1 ನೇ ಆರೋಪಿಯು ಚಾಸಾ-1 ರಿಂದ 3 ಮತ್ತು ನನ್ನ ವಿರುದ್ಧ ದೂರನ್ನು ದಾಖಲಿಸಿರುತ್ತಾರೆ ಎಂದರೆ ಸರಿ. ಅದರ ಬಾಬ್ತು ನನ್ನ ಮತ್ತು ಚಾಸಾ-1, ಪುಟ್ಟಸ್ವಾಮಿಗೌಡ ಮತ್ತು ಶಶಿಕುಮಾರ್ ವಿರುದ್ಧ ಕ್ರೈ.ನಂ.1/2024 ರಡಿಯಲ್ಲಿ ಕಳ್ಳತನ ಪ್ರಕರಣ ದಾಖಲಾಗಿರುತ್ತದೆ ಎಂದರೆ ಸರಿ. ಅದರ ಬಾಬ್ತು ಸಿಸಿ.2303/2024 ರಡಿಯಲ್ಲಿ ಇದೇ ನ್ಯಾಯಾಲಯದ ಮುಂದೆ ಪ್ರಕರಣ ಚಾಲ್ತಿಯಲ್ಲಿರುತ್ತದೆ ಎಂದರೆ ಸರಿ.

ಈ ಕಾರಣ ಚಾಸಾ-1 ರವರೊಟ್ಟಿಗೆ ಸೇರಿ ನಾವುಗಳು ಆರೋಪಿಗಳಿಗೆ ತೊಂದರೆಯನ್ನು ನೀಡುತ್ತಿದ್ದೇವೆ ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ-1 ರವರ ಒಳ್ಳೆಯ ಆತ್ಮೀಯರಾಗಿರುವ ಕಾರಣ ಆರೋಪಿಗಳಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಕೆಲವು ಕಂಬಗಳು ಬಿದ್ದಿರುತ್ತವೆ. ನಿಪಿ-3 ರಿಂದ 5 ರಲ್ಲಿ ಕಂಬಗಳು ಬಿದ್ದಿರುವ ಬಗ್ಗೆ ಯಾವುದೇ ಕುರುಹುಗಳು ಇಲ್ಲ ಎಂದರೆ ಸರಿ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ನನ್ನ ಮತ್ತು 1 ನೇ ಆರೋಪಿಯ ವಿರುದ್ಧ ವೈಮನ್ಸಿರುವ ಕಾರಣ ಚಾಸಾ-1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.